# ಒಡಿಶಾದ 'ಪಾರಿ ಮಾ'

■ ಪ್ರವೀಣ ಕುಲಕರ್ಣಿ

ಇನ್ನೇನು ಪ್ರಸಕ್ತ ಲೋಕಸಭೆಯ ಅವಧಿ ಮುಕ್ತಾಯದ ಘಟ್ಟದಲ್ಲಿದೆ. ಈ ಲೋಕಸಭೆಯ ಅವಧಿಯಲ್ಲಿ ಹಲವು ಸಂಸದರು ಭಾರಿ ಸದ್ದು ಮಾಡಿದರು. ಇನ್ನು ಹಲವರು 'ನಿರುಪಯುಕ್ತ'ರಾಗಿ, ನಿರುಮ್ಮಳರಾಗಿ ಹಾಗೇ ಉಳಿದರು. ಕೆಲವರು ಮಾತ್ರ ದೊಡ್ಡದಾಗಿ ಸದ್ದು ಮಾಡದಿದ್ದರೂ ಚುನಾಯಿಸಿ ಕಳುಹಿಸಿದ ಕ್ಷೇತ್ರದ ಜನರ ಸೇವೆಯನ್ನು ಚಾಚೂತಪ್ಪದೇ ಮಾಡಿದರು. ಅಂಥವರಲ್ಲಿ ಒಡಿಶಾದ ಪ್ರಮೀಳಾ ಬಿಸೊಯಿ ಅವರದೂ ಒಂದು ಹೆಸರು. ಕಾಲಲ್ಲಿ ಹವಾಯಿ ಚಪ್ಪಲಿ ಹಾಕಿಕೊಂಡು, ತಲೆಯ ಮೇಲೆ ಸೀರೆ ಸೆರಗು ಹೊದ್ದುಕೊಂಡು, ಥೇಟ್ ಹಳ್ಳಿ ಅಜ್ಜಿಯಾಗಿ ಸಂಸತ್ ಭವನಕ್ಕೆ ಬರುತ್ತಿದ್ದರು ಪ್ರಮೀಳಾ. ಎಪ್ಪತ್ತೆರಡು ವರ್ಷದ ಈ ಅಜ್ಜಿಗೆ 'ಸದನದ ಭಾಷೆ'ಯಾದ ಹಿಂದಿ ಅವರಿಗೆ ಅರ್ಥವಾಗುವುದಿಲ್ಲ. ಹಾಗಾದರೆ 'ಅವರಿಗೆ ಇಂಗ್ಲಿಷ್ ಬರುತ್ತಾ' ಎಂದು ಕೇಳಬೇಡಿ. ಅವರಿಗೆ ಮಾತೃಭಾಷೆ ಒಡಿಯಾ ಬಿಟ್ಟರೆ ಬೇರೆ ಯಾವ ಭಾಷೆಯೂ ಬರುವುದಿಲ್ಲ. ಒಡಿಯಾ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡಬಲ್ಲರು. ತಮ್ಮ ಕ್ಷೇತ್ರದ ಜನರ ಸಂಕಟವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಬಲ್ಲರು.

ಪ್ರಮೀಳಾ ಅವರದು ಸಂಸದೆಯ ಪಾತ್ರಕ್ಕಿಂತ ಮೀರಿದ ವ್ಯಕ್ತಿತ್ವ. ಅಂಗನವಾಡಿಯೊಂದರಲ್ಲಿ ಸಹಾಯಕಿ ಕೆಲಸ ಮಾಡುತ್ತಿದ್ದ ಅವರಿಗೆ ಯಾವ ಮಗುವೂ ಹಸಿವಿನಿಂದ ನರಳಬಾರದು ಎನ್ನುವ ಕಕ್ಕುಲಾತಿ. ರಾಜ್ಯದಲ್ಲಿ ನಡೆದ ಮಹಿಳಾ ಶಕ್ತಿ ಆಂದೋಲನದಲ್ಲಿ ತುಂಬಾ ಸಕ್ರಿಯವಾಗಿ ಪಾಲ್ಗೊಂಡವರು. ಹಳ್ಳಿ–ಹಳ್ಳಿಗೂ ಓಡಾಡಿ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳನ್ನು ಕಟ್ಟಿದವರು. ಮಹಿಳೆಯರಲ್ಲಿ ಶಕ್ತಿಯನ್ನೂ ತುಂಬಿದವರು. ಪರಿಸರ ಆಂದೋಲನದಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡವರು. ನವಿಲುಗಳ ರಕ್ಷಣೆಯಲ್ಲಿ ವಿಶೇಷವಾದ ಆಸ್ಥೆಯನ್ನು ಹೊಂದಿದವರು. ಒಡಿಶಾದ ಗಂಜಾಂ ಜಿಲ್ಲೆಯ ಆಸ್ಕಾ ಹೋಬಳಿಗೆ ಸೇರಿದ ಪ್ರಮೀಳಾ, ಆಸ್ಕಾದ ಪಕಿಡಿ ಪರ್ವತ ಶ್ರೇಣಿಯಲ್ಲಿ ನೂರಾರು ಸಂಖ್ಯೆಯ ನವಿಲುಗಳನ್ನು ಕಳ್ಳಬೇಟೆಯಿಂದ ತಪ್ಪಿಸಿದವರು. ಪ್ರಾಣಿ–ಪಕ್ಷಿಗಳ ಬೇಟೆಯಾಡದಂತೆ ತಡೆಯಲು ಹಸಿರು ಸೇನೆಯನ್ನೇ ಕಟ್ಟಿದವರು. ಸಂಸತ್ ಅಧಿವೇಶನದಲ್ಲಿ ಪಾಲ್ಗೊಳ್ಳಲು ಮಾತ್ರ ದೆಹಲಿಗೆ ಧಾವಿಸುತ್ತಿದ್ದ ಅವರು, ಮಿಕ್ಕಂತೆ ಜನರ ಮಧ್ಯೆ, ಪಕಿಡಿಯ ನವಿಲುಗಳ ಮಧ್ಯೆ ಬದುಕು ಸಾಗಿಸಿದವರು.

ಅಂದಹಾಗೆ, ಪ್ರಮೀಳಾ ಅವರದು ಬಾಲ್ಯವಿವಾಹ. ಐದನೇ ವಯಸ್ಸಿನಲ್ಲೇ ಅವರ ತಂದೆ–ತಾಯಿ ಅವರಿಗೆ ಮದುವೆ ಮಾಡಿದ್ದರು. 14ನೇ ವಯಸ್ಸಿನಲ್ಲಿ ಗಂಡನ ಮನೆಗೆ ಬಂದು, ಸಂಸಾರದ ಹೊಣೆ ಹೊತ್ತವರು ಅವರು. ಬಾಲ್ಯದ ಆ ನೆನಪುಗಳು ಅವರಲ್ಲಿ ಗಟ್ಟಿಯಾಗಿ ಹರಳುಗಟ್ಟಿವೆ. ಆದ್ದರಿಂದಲೇ ಬಾಲ್ಯವಿವಾಹದ ವಿರುದ್ಧ ರಾಜ್ಯದಲ್ಲಿ ದೊಡ್ಡದಾಗಿ ಧ್ವನಿ ಎತ್ತಿ, ತಳಮಟ್ಟದಲ್ಲಿ ಜಾಗೃತಿಯನ್ನು ಮೂಡಿಸಿದ್ದಾರೆ.

ಪರಿಸರದ ಮೇಲೆ ಅವರು ತೋರುವ ಕಾಳಜಿ, ನೆಲ–ಜಲದ ಸಂರಕ್ಷಣೆಗಾಗಿ ಅವರು ದುಡಿಯುವ ಪರಿಯನ್ನು ಕಂಡು, ಅಲ್ಲಿನ ಜನ ಅವರನ್ನು ಪ್ರೀತಿಯಿಂದ ಪಾರಿ ಮಾ (ದೇವತಾ ಸ್ವರೂಪಿ ಅಮ್ಮ) ಎಂದು ಕರೆಯುತ್ತಾರೆ. ಪರಿಸರಕ್ಕೆ ಧಕ್ಕೆಯಾಗುವಂತಹ ಯಾವುದೇ ಯೋಜನೆ ಬಂದರೂ ಮುಂದೆ ನಿಂತು ಪ್ರತಿಭಟಿಸುವವರು ಇದೇ 'ಪಾರಿ ಮಾ'. ಸಂಸತ್ ಸದಸ್ಯೆಯಾಗಿ ಆಯ್ಕೆಯಾದ ಮೇಲೆ ಮೊದಲ ಸಲ ದೆಹಲಿಗೆ ಹೊರಟುನಿಂತಾಗ, ಭುವನೇಶ್ವರ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರು ಒಂದು ಪ್ರಶ್ನೆ ಹಾಕಿದರು. 'ನೀವೀಗ ರಾಷ್ಟ್ರದ ರಾಜಧಾನಿಗೆ ಹೊರಟಿದ್ದೀರಿ. ಅದೂ ವಿಮಾನದಲ್ಲಿ. ನಿಮಗೆ ಏನನಿಸುತ್ತದೆ' ಎಂದು. ಅದಕ್ಕೆ ಪ್ರಮೀಳಾ ಅವರು ಏನೆಂದು ಉತ್ತರಿಸಿದರು ಗೊತ್ತೆ? 'ನಾನು ಡೆಲ್ಲೀಲಿ ಇದ್ದಾಗ ಈ ಕಾಡಿಗೆ, ಇಲ್ಲಿನ ನವಿಲುಗಳಿಗೆ ಏನಾದರೂ ಆದರೆ ಹೇಗೆಂಬ ಚಿಂತೆ ಕಾಡುತ್ತಿದೆ' ಎಂದು ಮುಗ್ಧವಾಗಿ ಹೇಳಿದ್ದರು.



ಕೇವಲ ಮೂರನೇ ಇಯತ್ತೆವರೆಗೆ ಓದಿರುವ ಪ್ರಮೀಳಾ ಅವರ ಲೋಕಜ್ಞಾನದ ಮುಂದೆ ಪುಸ್ತಕ ಪಂಡಿತರ ಆಟವೇನೂ ನಡೆಯುವುದಿಲ್ಲ. ಅಧಿಕಾರಿಗಳು, ನಿಯಮದ ಕಣ್ಣಿನಿಂದ ನೋಡುವ ಪ್ರತೀ ಸಮಸ್ಯೆಯನ್ನು ಈ ಪಾರಿ ಮಾ, ಮಾನವೀಯ ಕಣ್ಣಿನಿಂದ ನೋಡುತ್ತಾರೆ. ಬಡವರ ಕಣ್ಣೀರು ಒರೆಸಲು ಯಾವ ನಿಯಮವೂ ಅಡ್ಡಿಯಾಗಬಾರದು ಎಂದು ಅಧಿಕಾರಿಗಳಿಗೆ ಬುದ್ಧಿವಾದ ಹೇಳುತ್ತಾರೆ. ಆಗ, ಸಮಸ್ಯೆಯ ಪರಿಹಾರಕ್ಕೆ ನಿಯಮದಲ್ಲಿನ ಬೇರೆ ಬೇರೆ ಹಾದಿಗಳೂ ತೆರೆದುಕೊಳ್ಳುತ್ತವೆ. ಈ ಸಂಸದೆ ಜನರ ನೆರವಿಗೆ ಧಾವಿಸುವ ವಿಧಾನವೇ ಇದಾಗಿದೆ. ಪ್ರಮೀಳಾ ಅವರಿಗೆ ಅವರ ಊರಿನಲ್ಲಿರುವುದು ಪುಟ್ಟದೊಂದು ಮನೆ. ಸಂಸದೆಯಾಗಿ ಐದು ವರ್ಷ ಪೂರೈಸಿದ ಮೇಲೂ ಅವರ ಮನೆಯ ಸ್ವರೂಪದಲ್ಲಿ ವ್ಯತ್ಯಾಸವೇನೂ ಆಗಿಲ್ಲ.

ಅಂಗನವಾಡಿ ಕಾರ್ಯಕರ್ತೆಯಾಗಿ ಬಿಸಿಯೂಟ ತಯಾರಿಸುತ್ತಿದ್ದ ಪ್ರಮೀಳಾ ಅವರು, ಬಿಡುವಿನ ವೇಳೆಯಲ್ಲಿ ರಸ್ತೆಯ ಪಕ್ಕ, ಶಾಲೆಯ ಆವರಣದ ದಂಡೆಯಲ್ಲಿ, ಕಚೇರಿ ಆವರಣದಲ್ಲಿ ಸಸಿನೆಟ್ಟು, ನೀರುಣಿಸುತ್ತಿದ್ದರು. ಆ ಸಸಿಗಳೆಲ್ಲ ಈಗ ಹೆಮ್ಮರವಾಗಿ ಬೆಳೆದಿವೆ. ತಾವೇ ನೀರುಣಿಸಿ ಬೆಳೆಸಿದ ಮರಗಳ ನೆರಳಲ್ಲಿ ಕುಳಿತು ದಣಿವಾರಿಸಿಕೊಳ್ಳುವಾಗ ಪ್ರಮೀಳಾ ಅವರಿಗೆ ಧನ್ಯತಾಭಾವ. ಸರ್ಕಾರದ ಪ್ರತಿಯೊಂದು ಯೋಜನೆಯ ಲಾಭವೂ ತಮ್ಮ ಕ್ಷೇತ್ರದ ಜನರಿಗೆ ತಟ್ಟಬೇಕು ಎಂಬ ಉತ್ಕಟ ಅಭಿಲಾಷೆ ಅವರಿಗೆ. ಕಾಡು–ಬೆಟ್ಟ ಹಾಗೇ ಉಳಿಯಬೇಕು, ನೆಲ–ಜಲ ಹಸನಾಗಿರಬೇಕು, ಜನರ ಬದುಕು ಬೆಳಗಬೇಕು ಎಂಬ ಮಂತ್ರವನ್ನು ಜಪಿಸುತ್ತಾರೆ ಈ ಅಜ್ಜಿ. ಸಂಸದೆಯಾಗಿ ಲೋಕಸಭೆಯಲ್ಲಿ ಮಾತನಾಡಿದಾಗ, 'ಮಹಿಳೆಯರ ಬದುಕು ಬದಲಾಗಬೇಕೆಂಬ ಇಚ್ಛೆ ನಿಮ್ಮದಾಗಿದ್ದರೆ ತಳಮಟ್ಟದಿಂದ ಅವರಿಗೆ ನೆರವು ನೀಡಿ' ಎಂದು ಹಳ್ಳಿಗಳತ್ತ ಬೊಟ್ಟು ಮಾಡಿ ತೋರಿಸಿದ್ದರು. ದೆಹಲಿಯ ಕೆಟ್ಟ ರಾಜಕೀಯದ ಸಹವಾಸದಲ್ಲಿ ಐದು ವರ್ಷ ಕಳೆದರೂ ಅದೇ ಹಳ್ಳಿಯ ಪರಿಶುದ್ಧತೆಯನ್ನು ಕಾಯ್ದುಕೊಂಡ ಇಂತಹ ತಾಯಿ ಅಥವಾ ತಾಯಿಹೃದಯಿ ನಮ್ಮ–ನಿಮ್ಮ ಕ್ಷೇತ್ರದಲ್ಲೂ ಸಂಸದೆಯಾದರೆ ಎಷ್ಟು ಚೆನ್ನ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65